MADAM SPEAKER.—It is very obvious.

CALLING ATTENTION TO MATTERS OF URGENT PUBLIC IMPORTANCE

(i) *re : Rates high Charged by druggists*

SRI T.R. SHAMANNA.(Fort)— I call the attention of the Hon. Minister for Health to the unreasonable rates charged for essential medicines/drugs by the Druggists in Co-operation with officials of the Drug Controllers' Officer.

SRI H.M. CHANNABASAPPA (Minister for Health)— I wish to make the following statement.

It is not true that unreasonable rates are charged for essential medicines by Druggists in Collusion with the Drugs Control Officials in the State. The rates of essential medicines are very closely watched by the Department and the Inspectors of the Drugs Control Department carry out inspections in all parts of the State. The rates of all drugs are controlled by the Government of Inda under the Drugs (Price Control) Order 1970 issued under the Essential Commodities Act. The salient features of this Order are as follows.-

1. (a) Prescribing norms for fixing the maximum prices and th making of prices for the drugs by every manufacturer in the country,

(b) fixing margin of profit for the trade.

(c) fixing the retail price for the consumer

(d) Insisting on the declaration of the maximum retail price on the labels and the containers of drugs as well as in the price list supplied by the manufacturers.

2. In Karnataka State, these conditions are effectively enforced and all the Drugs manufactured as well as stocked for sale, are bearing the maximum retail prices.

3. The officers of the Department inspect the Drugs Licencees of the manufatcurers well as Chemists and Druggists. They check the prices from the Cash Memos/Bills/Invoices, etc., and verify whether there is any contravention of law by overcharging or overselling any drug.

4. Whenever cases of contraventions are detected, action is taken against the persons who have contravened the above order.

Details of action taken by the Department during the period from 1st July 1975 to 31st March 1976 are as follows:—

Month	No. of Inspections		Prosecutions launched		Number of Licences Suspended	Number of Licences Cancelled
	DPC Act	D&C 1940	DPC Act	D&C 1940		
July	11	205	1	4	7	36
August	55	331	...	1	4	223
September	135	336	1	1	14	36
October	41	304	...	...	...	45
November	69	319	...	1	1	26
December	49	323	1	2	18	33
January	112	372	...	3	60	21
February	107	365	...	1	...	5
March	107	...	2	...	...	...RNR
Total ...	686	2555	5	13	50	425

It may be seen that whenever and wherever necessary the Department has taken stringent action by suspendingard cancelling licences and prosecutions have also been launched in a number of cases. These details reveal not only action taken for contravention of Drugs (Price Control) order 1970, but also for the contravention under the Drugs and Cosmetics Act, 1940 and rules thereunder, enforcement of which is Entrusted to the Drugs Control Department.

The question of strengthening the Drugs Control Department for more effective enforcement of the Law relating to Drugs is under consideration of Government.

ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಅಧ್ಯಕ್ಷರೇ, ನಾನು ಮತ್ತು ಶಾಮಣ್ಣನವರು ರೂಲ್ 312ರ ಪ್ರಕಾರ ಈ ಸೂಚನೆಯನ್ನು ಕಳುಹಿಸಬೇಕಾದರೆ ಇದಕ್ಕೆ ನಾನೇ ಕಾರಣ. ಇದು ನನಗೆ ಸಂಬಂಧಪಟ್ಟ ವಿಷಯವಾದ್ದರಿಂದ ಇದನ್ನು ಹೇಳಿ ಬರೆಸಿದ್ದೇನೆ, ಆದ್ದರಿಂದ ತಮ್ಮ ಅಪ್ಪಣೆ ಪಡೆದು ಎರಡು ನಿಮಿಷದಲ್ಲಿ ಹೇಳುತ್ತೇನೆ. ಇದು ಹೇಗೆ ಉದ್ಭವಿಸಿತು ಎಂದರೆ ಈಗ ನಾನು ಡಯಾಬಿಟೀಸ್ ಪೇಷೆಂಟ್, ಆದ್ದರಿಂದ ಪ್ರತಿದಿವಸ 80 ಇನ್‌ಸೋಲಯನ್ ಯೂನಿಟ್ ನಲ್ಲಿ 40 ಯೂನಿಟ್ ಪ್ಲೇನ್, ಮತ್ತೆ 40ಯೂನಿಟ್ ಪಿ ಜೆಡ್. ತೆಗೆದುಕೊಳ್ಳಬೇಕಾಗಿದೆ. ಇದನ್ನು ಹೋಲ್‌ಸೇಲರ್ಸ್ ಹತ್ತಿರ ವಿಚಾರ ಮಾಡಿದರೆ ರಿಜ್ಜೈಲರ್ಸ್‌ಗೆ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ರಿಜ್ಜೈಲರ್ಸ್ ಕೇಳಿದರೆ ನಮ್ಮಲ್ಲಿ ಸ್ಟಾಕು ಮುಗಿದುಹೋಗಿದೆ, ಎಂದು ಹೇಳುತ್ತಾರೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇದು ನನಗೆ ಪ್ರತಿದಿವಸ ಬೇಕಾಗುತ್ತದೆ. ಇದಕ್ಕಾಗಿ ನಾನು ಮೂರು ತಿಂಗಳು ಆಸ್ಪತ್ರೆಯಲ್ಲಿ ಇದ್ದೆ. ನಂತರ ಯೋಚನೆ ಮಾಡಿ ನಮ್ಮ ಆರೋಗ್ಯ ಮಂತ್ರಿಗಳವರನ್ನು ಕೇಳಿದರೆ ಅನುಕೂಲವಾಗುತ್ತದೆ ಎಂದು ಮಾನ್ಯ ಚನ್ನಬಸಪ್ಪ

ನವರಿಗೆ ಹೇಳಿದೆ. ಅದಕ್ಕೆ ಮಾನ್ಯಮಂತ್ರಿಗಳು ಸಾವಧಾನವಾಗಿ ನಾನು ಕರೆದು ವಿಚಾರಿಸುತ್ತೇನೆ. ಎಂದು ಅಪ್ಪಣೆ ಕೊಟ್ಟರು. ಆನಂತರ ಮೂರು ದಿವಸ ಕಳೆದ ಮೇಲೆ ವಿಚಾರಿಸಿದ್ದಕ್ಕೆ ಈಗ ಅದು ಒಂದು ಸ್ವಲ್ಪ ಸ್ಕೇರ್‌ಸಿಟಿ ಇದೆ ಎಂದು ಹೇಳುತ್ತಾರೆ, ಸ್ವಲ್ಪ ನಿಧಾನವಾಗಿರಿ, ಮತ್ತೆ ನೀವು ಡೆಪ್ಯುಟಿ ಡೈರೆಕ್ಟರವರಿಗೆ ಕಾಗದ ಬರೆಯಿರಿ ಎಂದು ಹೇಳಿದರು, ಇಷ್ಟೊತ್ತು ಸ್ಕೇರ್‌ಸಿಟಿ ಇದೆ ಎನ್ನುವ ತಕ್ಕದನ್ನು ನಾನು ಒಪ್ಪುವುದಿಲ್ಲ ಇಷ್ಟೊತ್ತು ದುಡ್ಡು ಜಾಸ್ತಿ ಕೊಟ್ಟರೆ ಅದು ಸಿಕ್ಕುತ್ತಿದೆ.

ಇವರು ಹೀಗೆ ಹೇಳಿದ ಮೇಲೆ, ನಾನು ಡೆಪ್ಯುಟಿ ಡೈರೆಕ್ಟರ್ ಅವರನ್ನು ಹೋಗಿ ನೋಡಿದೆ. ಅವರು, ಡ್ರಗ್ ಇನ್‌ಸ್ಪೆಕ್ಟರಿಗೆ ಅವರನ್ನು ಹೋಗಿ ನೋಡಿ ಎಂದು ಹೇಳಿದರು. ಆನಂತರ, ಡ್ರಗ್‌ಇನ್‌ಸ್ಪೆಕ್ಟರ್‌ರವರು ನನಗೆ ಎರಡು ಪೀಸುಗಳನ್ನು ಕೊಟ್ಟರು. ಒಟ್ಟು 24 ರೂಪಾಯಿ 90 ಪೈಸೆಗಳನ್ನು ಒಂದೊಂದಕ್ಕೆ 12 ರೂಪಾಯಿ 45 ಪೈಸೆಗಳ ಹಾಗೆ ತಗೆದು ಕೊಂಡಿದ್ದಾರೆ. ಅದರ ಮೇಲೆ, 11—60 ರೂಪಾಯಿಗಳು ಮತ್ತು ಸ್ಥಳೀಯ ತೆರಿಗೆಗಳು ಪ್ರತ್ಯೇಕವೆಂದು ಇದೆ. ಆ ಡ್ರಗ್ ಇನ್‌ಸ್ಪೆಕ್ಟರವರು ನನಗೆ ಔಷಧಿ ಕೊಟ್ಟಿದ್ದಕ್ಕೆ ಮತ್ತು, ಆ ಔಷಧಿಗೆ ಪಡೆದ ೨೪ ರೂಪಾಯಿ ೯೦ ಪೈಸೆಗೆ ರಸೀದಿ ಕೊಟ್ಟಿಲ್ಲ. ಮಾರುಕಟ್ಟೆಯಲ್ಲಿ ಸಿಗದ ಔಷಧಿ, ಡ್ರಗ್ ಇನ್‌ಸ್ಪೆಕ್ಟರಿಗೆ ಹೇಗೆ ಬಂತು? ಮತ್ತು ಒಂದು ವೇಳೆ ಅವರಿಗೆ ಬಂದಿದ್ದರೂ, ಅವರಿಗೆ ಔಷಧಿಗಳನ್ನು ಮಾರುವ ಅಧಿಕಾರವಿದೆಯೇ? ಒಂದು ವೇಳೆ ಅಧಿಕಾರವಿದ್ದರೆ, ಅವರು ಏತಕ್ಕೆ ನನಗೆ ರಸೀದಿ ಕೊಡಲಿಲ್ಲ. ಅಥವಾ ರಸೀದಿ ಕೊಡದೆ ಔಷಧಿ ಕೊಡುವ ಅಧಿಕಾರ ಅವರಿಗಿದೆಯೇ? ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಮಂತ್ರಿಗಳು ಕೊಟ್ಟಿರುವ ಪಟ್ಟಿ ಪ್ರಕಾರ. 3241 ಪ್ರಕರಣಗಳ ಬಗ್ಗೆ ತನಿಕೆ ಮಾಡಿದ್ದು, ಅವುಗಳಲ್ಲಿ 415ರ ಲೈಸೆನ್ಸನ್ನು ಕ್ಯಾನ್ಸಲ್ ಮಾಡಲಾಗಿದೆ ಎಂದು ಗೊತ್ತಾಗುತ್ತದೆ. ಇವತ್ತು ಮಾರುಕಟ್ಟೆಯಲ್ಲಿ ಇನ್ಸುಲಿನ್ ಸರಿಯಾದ ಬೆಲೆ ಕೊಟ್ಟರೆ ಸಿಕ್ಕುವುದಿಲ್ಲ. ಹೆಚ್ಚು ಬೆಲೆ ಕೊಟ್ಟರೆ ಮಾತ್ರ ಸಿಕ್ಕುತ್ತದೆ, ಇದರ ಬಗ್ಗೆ ಅನೇಕ ವೇಳೆ ಪ್ರಸ್ತಾಪ ವನ್ನೂ ಕೂಡ ಮಾಡಲಾಗಿದೆ. ಅಷ್ಟೇ ಅಲ್ಲದೆ, ಅನೇಕ ಔಷಧಿಗಳ ಬೆಲೆ—ಮ್ಯಾನುಫಾಕ್ಚರ್ ಬೆಲೆಗೂ ಮತ್ತು ಮಾರುಕಟ್ಟೆ ಬೆಲೆಗೂ ಸುಮಾರು 30-40 ಪರ್ಸೆಂಟ್‌ನಷ್ಟು ವ್ಯತ್ಯಾಸವಾಗಿ ರುತ್ತದೆ. ಆದರೆ ಮಾನ್ಯ ಮಂತ್ರಿಗಳು ಅದು ನಾನ್ ರೀಸನಬಲ್ ರೇಟುಗಳಲ್ಲ ಎಂದು ಹೇಳು ತ್ತಿದ್ದಾರೆ. ಆದುದರಿಂದ ಅವರು ದಯವಿಟ್ಟು ಇದರ ಬಗ್ಗೆ ವಿವರಣೆ ಕೊಡಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ,—ಡ್ರಗ್ ಕಂಟ್ರೋಲರ್ ಕಾನೂನು ಪ್ರಕಾರವಾಗಿ ಅಧಿಕಾರಿ ಗಳು ಆಗಿಂದಾಗ್ಗೆ ತನಿಕೆ ಮಾಡಿ, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವ ಪದ್ಧತಿಯಿದೆ. ನನಗೆ ಕೊಟ್ಟಿರುವ ಅಂಕಿ—ಅಂಶಗಳನ್ನು ಮಾತ್ರ ನಾನು ಇಲ್ಲಿ ತಿಳಿಸಿದ್ದೇನೆ, ಶ್ರೀಪಾನ್ ನಾಗಣ್ಣನವರು ಬಿ.ಪಿ, ಇನ್ಸುಲಿನ್ ಸಿಕ್ಕುತ್ತಿಲ್ಲವೆಂದೂ ಮತ್ತು ಅವರಿಂದಾಗಿ ಅವರಿಗಾದ ತೊಂದರೆಯನ್ನೂ ನನ್ನ ಗಮನಕ್ಕೆ ತಂದಿದ್ದಾರೆ. ಪೂರೈಕೆ ಬಹಳ ಕಡಿಮೆ ಪ್ರಮಾಣದಲ್ಲಿದ್ದರೂ, ಎಲ್ಲಿಯಾದರೂ ಪತ್ತೆ ಮಾಡಿ ಮಾನ್ಯ ಸದಸ್ಯರಿಗೆ ಅದನ್ನು ಒದಗಿಸುವಂತೆ ಆಜ್ಞೆ ಮಾಡಿದೆ. ಆನಂತರ ಅವರಿಗೆ ಔಷಧಿ ಕೊಡರಾಯಿತು ಎಂದು ನನಗೆ ವರ್ತಮಾನ ಬಂತು, ಆದರೆ, ಮಾನ್ಯ ಸದಸ್ಯರು ಆನಂತರವೇನಾಯಿತು ಎಂದು ನನಗೆ ತಿಳಿಸಲಿಲ್ಲ. ಈಗ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಸ್ವಾಭಾವಿಕವಾದುದು, ಎಲ್ಲಿಯೂ ಸಿಕ್ಕದ ಔಷಧಿ ಡ್ರಗ್ ಕಂಟ್ರೋಲ್ ಅವರ ಬಳಿ ಹೇಗೆ ಬಂತು ಮತ್ತು ಅವರು ಅದಕ್ಕೆ ರಸೀದಿ ಏತಕ್ಕೆ ಕೊಡಲಿಲ್ಲ ಎಂದು ಕೇಳಿದರು. ಈ ಎರಡು ಪ್ರಶ್ನೆಗಳು ಸ್ವಾಭಾವಿಕವಾಗಿ ಕೇಳುವ ಪ್ರಶ್ನೆಗಳೇ ಔಷಧಿಗಳು ಕಳ್ಳ ಪೇಟೆಯಲ್ಲಿ ಮಾರಾಟವಾಗುತ್ತಿವೆ. ಎಂದು ನಮ್ಮ ಗಮನಕ್ಕೆ ತಂದಿದ್ದಾರೆ. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ ನಾವು ಎಷ್ಟು ಬಂದೋಬಸ್ತ್ ಮಾಡಿದರೂ, ನಮ್ಮ ಗಮನಕ್ಕೆ ಬಾರದೇ ಎಷ್ಟೋ ವಿಷಯಗಳು ನಡೆಯುತ್ತವೆ ಅಂತಹವುಗಳನ್ನು ನಮ್ಮ ಗಮನಕ್ಕೆ ತಂದರೆ, ನಾವು ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಕಳ್ಳಪೇಟೆ ಮುಂದೆ ಕೂಡ ಆಗದೇ ಇರುವುದಕ್ಕೂ ಎನೇನು ಕ್ರಮಗಳನ್ನ ತಗೆದು ಕೊಳ್ಳಬೇಕೋ ಅಷ್ಟನ್ನು ತೆಗೆದುಕೊಳ್ಳುತ್ತೇನೆ ಎಂದು ಅವರಿಗೆ ಭರವಸೆ ಕೊಡುತ್ತೇನೆ.

ಮಾನ್ಯ ಶಾಮಣ್ಣನವರು ಮಾತನಾಡುತ್ತಾ, ಶೇಕಡಾ ವ್ಯತ್ಯಾಸವೇತಕ್ಕೆ ಬಂತು ಎಂದು ಕೇಳಿದ್ದಾರೆ. ಅದನ್ನು ನಾವು ಗೊತ್ತು ಮಾಡುವುದಿಲ್ಲ. ಕೇಂದ್ರ ಸರ್ಕಾರದವರು ಉತ್ಪಾದನಾ ವೆಚ್ಚವನ್ನು ನೋಡಿಕೊಂಡು ಅವುಗಳ ಬೆಲೆಯನ್ನು ನಿಗದಿ ಮಾಡುತ್ತಾರೆ. ಈ ಬೆಲೆಗೆ ಮಾರಾದಿದ್ದಲ್ಲಿ, ಶಾಸನದ ಪ್ರಕಾರ ಅವರಿಗೆ ಶಿಕ್ಷೆಯಾಗುತ್ತದೆ. ಆದುದರಿಂದ, ಎಲ್ಲೆಲ್ಲಿ ಲೋಪದೋಷಗಳಿವೆ ಎಂಬುದನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತರಲಿ, ನಾವೂ ಕೂಡ ಲೋಪದೋಷಗಳನ್ನು ತಿಳಿಯಲು ಪ್ರಯತ್ನ ಮಾಡುತ್ತೇವೆ. ಅನಂತರ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇದರಲ್ಲಿ ನಮಗೂ ನಿಮಗೂ ಯಾವುದೇ ಭಿನ್ನಾಭಿಪ್ರಾಯವಿಲ್ಲವೆಂದು ಸ್ಪಷ್ಟಪಡಿಸುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ಈ ವಿಚಾರವನ್ನು ೩೧೨ರ ಪ್ರಕಾರ ಚರ್ಚೆಗೆ ತರಬೇಕೆಂದು ಇದ್ದೆ. ನಾನು ಬಂದಾಗ ಮಾನ್ಯ ಮಂತ್ರಿಗಳು ಕುರ್ಚಿಯಲ್ಲಿರಲಿಲ್ಲ ಬಹುಶಃ ಮೇಲ್ಮನೆಗೆ ಹೋಗಿದ್ದಿರಬೇಕು. ಆದುದರಿಂದ ಈ ಮೂಲಕ ನಾನು ಇದನ್ನು ತಮ್ಮ ಗಮನಕ್ಕೆ ತರಬೇಕಾಯಿತು. ಮೊದಲೇ ತಮ್ಮ ಗಮನಕ್ಕೆ ಈ ವಿಚಾರವನ್ನು ತರದಿದ್ದುದಕ್ಕೆ ನಾನು ಮಾನ್ಯ ಮಂತ್ರಿಗಳಲ್ಲಿ ಕ್ಷಮೆ ಬೇಡುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರಲ್ಲಿ ಕ್ಷಮೆ ಕೇಳುವುದೇನೂ ಇಲ್ಲ. ನಿಮ್ಮ ಅಭಿರಾಷೆಯಂತೆ ನಮ್ಮ ಅಭಿರಾಷೆಯೂ ಇದೆ.

ಶ್ರೀ ಕೆ. ಎಂ. ನಾಗಣ್ಣ.—೨೪ ರೂಪಾಯಿ ೯೦ ಪೈಸೆ ತೆಗೆದುಕೊಂಡು ಅದಕ್ಕೆ ರಸೀದಿ ಕೊಡದೆ ಎರಡು ಟ್ಯೂಬ್ ಇನ್ಸುಲಿನ್ ಕೊಟ್ಟ ಡ್ರಗ್ ಇನ್‌ಸ್ಪೆಕ್ಟರಿಗೆ, ಅದು ಹೇಗೆ ಬಂತು, ರಸೀದಿ ಕೊಡದೆ ಅದನ್ನು ಮಾರಾಟ ಮಾಡುವುದಕ್ಕೆ ಅವನಿಗಿರುವ ಅಧಿಕಾರವೇನು ಎಂಬುದನ್ನು ಮಾನ್ಯ ಮಂತ್ರಿಗಳು ವಿಚಾರ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ಅವರು ನಮ್ಮ ಅಧಿಕಾರಿಗಳಲ್ಲ ನಿಮ್ಮ ಅಧಿಕಾರಿಗಳು. ಮುತ್ತು ಬಡವರಿಗೆ ಈ ಔಷಧಿ ಸುಲಭವಾಗಿ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆಚ್. ಎಂ. ಚನ್ನಬಸಪ್ಪ.— ಅಗತ್ಯವಾಗಿ, ಅದರಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ಯಾವ ಕಾಲದಲ್ಲಿ ಎಷ್ಟು ಎಷ್ಟು ಗಂಟೆಯಲ್ಲಿ ಅವರು ನಿಮಗೆ ಔಷಧಿಕೊಟ್ಟರು ಎಂಬ ವಿವರಗಳನ್ನು ಮಾನ್ಯ ಸದಸ್ಯರು ದಯವಿಟ್ಟು ಕಳುಹಿಸಿಕೊಟ್ಟರೆ. ಸೂಕ್ತ ಕ್ರಮವನ್ನು ನಾನು ತಕ್ಷಣವೇ ತೆಗೆದುಕೊಳ್ಳುತ್ತೇನೆ.

(ii) *Req :-hardship to the public due to the stoppage of giving loans through Rural Housing Cell*

SRI C. BYREGOWDA (Vemgal).—Madam, I call the attention of the Minister of State for Housing and Youth Services to the hardship caused to the public due to the stoppage of giving loans through the Rural Housing Cell.

SRI V. S. KOUJALGI (Minister of State for Housing and Youth Services).—Madam, I would like to make the following statement

Under the Rural Housing Scheme, cash loans are sanctioned to the economically weaker sections of the people in Rural areas- The loan assistance is upto 80%of the cost of the House subject to a ceiling limit of Rs. 5,000/-per house. This scheme was transferred to the Karnataka Housing Board in November 1970. Since then the Karnataka Housing Board has sanctioned loans in 12, 131 cases involving an amount of Rs. 448,35 lakhs, till the end of March 1976